

# ಮದುವೆ ಬಜೆಟ್

ಬಣ್ಣಬಣ್ಣದ ಹೂಗಳ ತೋರಣ ಹೊದ್ದು ನಿಂತ ಮಹಲಿನಲ್ಲಿ ಥರಹೇವಾರಿ ಬೆಳಕಿನ ಮಳೆಯಲ್ಲಿ ಮಿಂದು ಮಿಂಚುತ್ತಿರಬೇಕು. ನೆರೆದ ನೂರಾರು ಕಣ್ಣಿನ ಕ್ಯಾಮೆರಾಗಳಲ್ಲಿ ಆ ವೈಭವ ಬೆರಗಿನ ಜೊತೆ ಬೆರಕೆಯಾಗಿ ಬಂದಿಯಾಗಬೇಕು. ನಸುನಾಚುತ್ತಾ ಸಂಗಾತಿಯ ಕೈಯಲ್ಲಿನ ಹಾರಕ್ಕೆ ಕೊರಳೊಡ್ಡಬೇಕು. ಬಂದವರ ಮೆಚ್ಚುಗೆಯ ನಗು ನನ್ನೊಳಗೆ ಹುಚ್ಚು ಪುಳಕ ಎಬ್ಬಿಸಬೇಕು, ಮುಗುಳು ನಗುವಿನಲ್ಲೇ ಧನ್ಯವಾದ ಹೇಳಬೇಕು, ಈ ಗಳಿಗೆಗೆ ನಾನು ರಾಣಿಯಂತೆ ಬೀಗಬೇಕು...

ಹೀಗೆ ಮದುವೆಯೆಂಬ ಮಧುರ ಗಳಿಗೆಯ ಕುರಿತು ತಮ್ಮದೇ ಕನಸಿನ ನೇಯ್ಗೆ ಹೆಣೆಯದವರು ಯಾರಿದ್ದಾರೆ ಹೇಳಿ? ತೇರು ಹೊಸ ಅಲಂಕಾರದೊಂದಿಗೆ ಮುಂದುವರಿಯಲು ಅನುವಾಗುವ ಮದುವೆ ಎಂಬ ದಿನದ ಕುರಿತು ಎಲ್ಲರಲ್ಲೂ ಸಂಭ್ರಮ, ಕುತೂಹಲ, ಭಯ, ಬಯಕೆ, ನಾಚಿಕೆ ಎಲ್ಲವೂ ಇರುತ್ತದೆ. ಆ ಎಲ್ಲ ಆಕಾಂಕ್ಷೆಗಳ ಸಂಕ್ಷಿಪ್ತ ರೂಪ 'ನಮ್ಮ ಮದುವೆ ನೋಡಿದವರೆಲ್ಲ ಮೆಚ್ಚುವಂತಿರಬೇಕು' ಎಂಬಲ್ಲಿಗೆ ಬಂದು ನಿಲ್ಲುತ್ತದೆ. ಈ ಮೆಚ್ಚಿಸುವ ಆಟದಲ್ಲೇ ನಮಗೂ ನೆಚ್ಚು ಇದ್ದಿದ್ದರಿಂದ ಅದಕ್ಕಾಗಿ ಸಾಕಷ್ಟು ಕಸರತ್ತುಗಳೂ ನಡೆಯುತ್ತಲೇ ಇರುತ್ತವೆ.

ಇತ್ತೀಚೆಗಂತೂ ತಾರಾಕುಟುಂಬದವರ ಮದುವೆಗಳು ಮನರಂಜನಾ ವಾಹಿನಿಗಳಲ್ಲಿ ಬಿತ್ತರವಾಗುತ್ತವೆ. ಅದನ್ನು ಕಂಡು ಕಣ್ಣರಳಿಸುತ್ತಾ ಭಾವುಕರಾಗುವವರೂ ಇದ್ದಾರೆ. ಅಂದ ಚೆಂದದ ದಿರಿಸು, ಮಿರುಗು ಮೆರುಗಿನ ಆಭರಣ, ಮದುವೆ ಮನೆ ತುಂಬ ನಳನಳಿಸುವ ಹೂವು, ಬೆಳಕಿನ ತೋರಣ, ಬಾಯಲ್ಲಿ ನೀರೂರಿಸುವಂಥ ಭಕ್ಷ್ಯ ಭೋಜನಗಳು... ಒಂದು ದಿನ ತಾನೂ ಸೆಲೆಬ್ರಿಟಿ ಆಗಿಬಿಟ್ಟಂಥ ಕನಸು. ಅವರವರ ಮದುವೆಗಳಲ್ಲಿ ಅವರವರು ಸೆಲೆಬ್ರಿಟಿಗಳೇ ಬಿಡಿ!

ಭಾರತದಲ್ಲಿ ಮದುವೆಯ ನೆಪದಲ್ಲಿ ಪ್ರತಿವರ್ಷ ಒಂದು ಲಕ್ಷ ಕೋಟಿ ರೂಪಾಯಿ ಹಣವನ್ನು ವ್ಯಯಿಸಲಾಗುತ್ತದೆ ಎನ್ನುತ್ತದೆ ಒಂದು ಅಧ್ಯಯನ. ಇದರಲ್ಲಿಯೂ ಪ್ರತಿವರ್ಷ ಶೇ 25–30ರಷ್ಟು ಹೆಚ್ಚಿನ ಏರಿಕೆ ಕಾಣುತ್ತಿದೆಯಂತೆ. ಅದೇ ವರದಿಯ ಪ್ರಕಾರ ಭಾರತದ ಪ್ರತಿವ್ಯಕ್ತಿ ತಾನು ಬದುಕಿನಲ್ಲಿ ಉಳಿತಾಯ ಮಾಡಿದ ಹಣದ ಒಂದನೇ ಐದರಷ್ಟು ಭಾಗವನ್ನು ಮದುವೆಗಾಗಿ ವ್ಯಯಿಸುತ್ತಿದ್ದಾನೆ/ಳೆ.

ನಾವು ನಿತ್ಯದ ಬದುಕಿನಲ್ಲಿ ಏನೇ ಸಣ್ಣ ವಸ್ತು ಕೊಳ್ಳುವುದಿದ್ದರೂ ಅದಕ್ಕೆ ಖರ್ಚು ಮಾಡುವ ಹಣದ ಬಗ್ಗೆ ಸಾಕಷ್ಟು ಸಲ ಯೋಚಿಸುತ್ತೇವೆ. ಆದರೆ ಇದೇ ವ್ಯವಹಾರಿಕ ಜಾಣ್ಮೆ ಮದುವೆಯ ವಿಷಯದಲ್ಲಿ ಇರುತ್ತದೆಯೇ? ಹೆಚ್ಚಿನವರು ತಪ್ಪು ಮಾಡುವುದೇ ಇಲ್ಲಿ. 'ಮದುವೆಯೇನು ಮತ್ತೆ ಮತ್ತೆ ಆಗ್ತೇವೆಯೇ? ಒಮ್ಮೆ ನಡೆಯುವುದು; ಆದಷ್ಟೂ ಚೆನ್ನಾಗಿ ಆಗಬೇಕು' ಎನ್ನುವುದು ಎಲ್ಲರ ಮನಸ್ಸಿನ ಮಾತು. ಈ ಚೆನ್ನಾಗಿ ಆಗಬೇಕು ಎನ್ನುವುದರ ವ್ಯಾಪ್ತಿಯೊಳಗೆ ಸಾಕಷ್ಟು ದುಂದುವೆಚ್ಚಗಳೂ ಹೇಳದೇ ಕೇಳದೆ ಬಂದು ಕೂತಿರುತ್ತವೆ. ಕೊನೆಗೆ ಒಂದಿನ ದಿನದ ಮದುವೆಗೆ ಮಾಡಿದ ಸಾಲದ ಹೊರೆಯನ್ನು ಜೀವನಪೂರ್ತಿ ಹೊತ್ತು ಸಾಗಬೇಕಾಗುತ್ತದೆ.

ಹೀಗೆ ಬದುಕಿಡೀ ಹೊರಬೇಕಾದ ಸಾಲದ ಹೊರೆಯನ್ನೂ ಹೊರಿಸಿಕೊಳ್ಳದೆ, ನಾಲ್ಕು ಜನ ಮೆಚ್ಚಿ ಮದುವೆ ನಿಜದ ಸಡಗರವೂ ಆಗುವ ಹಾಗೆ ಯೋಜಿಸುವುದು ಸಾಧ್ಯವಿಲ್ಲವೇ? ಖಂಡಿತ ಸಾಧ್ಯವಿದೆ. ಆದರೆ ಅದಕ್ಕೆ ಕೊಂಚ ಜಾಣ್ಮೆ ಬೇಕು. ಅಂಥ ಜಾಣ್ಮೆಯ ಕೆಲವು ದಾರಿಗಳನ್ನು ಗಮನಿಸೋಣ.

## ಮದುವೆಯ ಸಿದ್ಧತೆ

ಮದುವೆಯ ಜವಾಬ್ದಾರಿ ಹೊರುವುದು, ಎಲ್ಲೂ ಕುಂದು ಬಾರದಂತೆ ಅಚ್ಚುಕಟ್ಟಿನ ತಯಾರಿ ಮಾಡುವುದು ಸುಲಭದ ಕೆಲಸವಲ್ಲ. ಮದುವೆಯ ಪ್ರಸ್ತಾವದಿಂದ ಹಿಡಿದು ಮದುವೆ ಮುಗಿಯುವಷ್ಟರಲ್ಲಿ ಜವಾಬ್ದಾರಿ ನಿರ್ವಹಿಸುವವರು ಹೈರಾಣಾಗಿಬಿಡುತ್ತಾರೆ. ಜವಾಬ್ದಾರಿಯ ಈ ಭಾರವನ್ನು ಇಳಿಸಲೆಂದೇ ಅನೇಕ ವೆಡ್ಡಿಂಗ್ ಪ್ಲ್ಯಾನರ್ ಸಂಸ್ಥೆಗಳು ಎಲ್ಲೆಡೆ ಹುಟ್ಟಿಕೊಂಡಿವೆ. ಸಮಾರಂಭದ ಸರ್ವ ಜವಾಬ್ದಾರಿಯನ್ನೂ ಹೊತ್ತು ನಿಮ್ಮನ್ನು ನಿರಾಳವಾಗಿರುವಂತೆ ಮಾಡುತ್ತವೆ. ಆದರೆ ಇದಕ್ಕೆ ಕಿಸೆ ತುಂಬಾ ಹಣವಿರಬೇಕು, ಮನಸ್ಸು ತುಂಬಾ ಖರ್ಚು ಮಾಡುವ ಉಮೇದಿರಬೇಕು.

ವೆಡ್ಡಿಂಗ್ ಪ್ಲ್ಯಾನರ್ ಸಹಾಯ ಪಡೆಯುವುದು